**Akashvani : Bangalore**
**National Bulletin In Kannada**
**26.03.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**26.03.2025 / 7.35 am**

**<><*<><>*><>**

<u>ಮುಖ್ಯಾಂಶಗಳು</u>

- **ರಾಜ್ಯಸಭೆಯಲ್ಲಿ ವಿಪತ್ತು ನಿರ್ವಹಣಾ ತಿದ್ದುಪಡಿ ಮಸೂದೆ -೨೦೨೪ ಕ್ಕೆ ಅನುಮೋದನೆ**
- **ತನ್ನ ಮೊದಲ ಸ್ವದೇಶಿ ನಿರ್ಮಿತ ಎಂ.ಆರ್.ಐ ಯಂತ್ರ ಅಭಿವೃದ್ಧಿಪಡಿಸಿದ ಭಾರತ**
- **ಭಾರತ-ಚೀನಾ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯ ಕುರಿತ ೩೩ನೇ ಕಾರ್ಯಕಾರಿ ಸಭೆ ಚೀನಾದಲ್ಲಿ ಸಂಪನ್ನ**
- **ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್‌ಗೆ ೧೧ ರನ್‌ಗಳ ಜಯ**

**<><*<><>*><>**

ವಿಪತ್ತು ನಿರ್ವಹಣಾ ತಿದ್ದುಪಡಿ ಮಸೂದೆ-೨೦೨೪ ಅನ್ನು ಸಂಸತ್ತು ಅಂಗೀಕರಿಸಿದ್ದು, ರಾಜ್ಯಸಭೆಯು ನಿನ್ನೆ ಅದನ್ನು ಅನುಮೋದಿಸಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಈ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ದೊರೆತಿತ್ತು. ಈ ಮಸೂದೆ ವಿಪತ್ತು ನಿರ್ವಹಣಾ ಕಾಯ್ದೆ, ೨೦೦೫ ಕ್ಕೆ ತಿದ್ದುಪಡಿ ತಂದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ -ಎನ್‌ಡಿಎಂಎ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಗಳ - ಎಸ್‌ಡಿಎಂಎ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವ ಉದ್ದೇಶ ಹೊಂದಿದೆ. ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಮತ್ತು ರಾಜ್ಯ ಕಾರ್ಯಕಾರಿ ಸಮಿತಿಯ ಬದಲಿಗೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ವಿಪತ್ತು ಯೋಜನೆಯನ್ನು ಸಿದ್ಧಪಡಿಸಲು ಈ ಮಸೂದೆಯು ಎನ್‌ಡಿಎಂಎ ಮತ್ತು ಎಸ್‌ಡಿಎಂಎ ಗೆ ಅಧಿಕಾರ ನೀಡುತ್ತದೆ. ರಾಜ್ಯ ರಾಜಧಾನಿಗಳು ಮತ್ತು ನಗರಗಳಿಗೆ ಪುರಸಭೆಯೊಂದಿಗೆ ಪ್ರತ್ಯೇಕ ನಗರ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ರಚಿಸಲು ಈ ಮಸೂದೆ ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ವಿಪತ್ತು ದತ್ತಾಂಶ ರಚನೆಗೂ ಈ ಮಸೂದೆಯಡಿ ಅವಕಾಶವಿದೆ. ಮಸೂದೆಯ ಮೇಲಿನ ಚರ್ಚೆಗೆ ನಿನ್ನೆ ಉತ್ತರಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿಪತ್ತುಗಳ ಗಾತ್ರ ಮತ್ತು ಪ್ರಮಾಣ ಬದಲಾಗಿದ್ದು, ಅದಕ್ಕೆ ಅನುಗುಣವಾಗಿ ಪ್ರತಿಕ್ರಿಯೆಗಳೂ

ಬದಲಾಗಬೇಕು ಈ ಮಸೂದೆಯೊಂದಿಗೆ, ಸರ್ಕಾರ ಕೇವಲ ಪ್ರತಿಕ್ರಿಯೆಯಿಂದ, ಕ್ರಿಯಾಶೀಲ ಅಪಾಯ ತಡೆಯೆಡೆಗೆ ಹೋಗುವ ಗುರಿ ಹೊಂದಿದೆ ಎಂದು ಅವರು ಹೇಳಿದರು. ಸರ್ಕಾರ, ನೈಜ-ಸಮಯದ ಕೃತಕ ಬುದ್ಧಮತ್ತೆ ಆಧಾರಿತ ಮೇಲ್ವಿಚಾರಣೆಯತ್ತ ಸಾಗಲು ಬಯಸುತ್ತದೆ. ಈ ಮಸೂದೆಯ ಮೂಲಕ, ಸರ್ಕಾರ-ನೇತೃತ್ವದ ಪ್ರತಿಕ್ರಿಯೆಯಿಂದ ಸಮಾಜ ಮತ್ತು ನಾಗರಿಕರು ಭಾಗಿಯಾಗಿರುವ ಬಹು ಆಯಾಮದ ಪ್ರತಿಕ್ರಿಯೆಯೆಡೆಗೆ ಹೋಗಲು ಬಯಸುತ್ತದೆ ಎಂದು ಸಚಿವ ಅಮಿತ್ ಶಾ ಹೇಳಿದರು.

**ಧ್ವನಿ: ಅಮಿತ್ ಕೇಂದ್ರ ಗೃಹ ಸಚಿವ ( ೨೭ ಸೆಕೆಂಡ್)**

**<><*<><>*><>**

ಭಾರತ ತನ್ನ ಮೊದಲ ಸ್ವದೇಶಿ ನಿರ್ಮಿತ ಮ್ಯಾಗ್ನೆಟಿಕ್ ರೆಸೊನೆನ್ಸ್ ಇಮೇಜಿಂಗ್-ಎಂ.ಆರ್.ಐ ಯಂತ್ರವನ್ನು ಅಭಿವೃದ್ಧಿಪಡಿಸಿದೆ. ಇದನ್ನು ನವದೆಹಲಿಯ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ-ಏಮ್ಸ್‌ನಲ್ಲಿ ಈ ವರ್ಷದ ಅಕ್ಟೋಬರ್ ವೇಳೆಗೆ ಪ್ರಾಯೋಗಿಕವಾಗಿ ಸ್ಥಾಪಿಸಲಾಗುವುದು.  ಪ್ರಸ್ತುತ ದೇಶದಲ್ಲಿ ಶೇಕಡ ೮೦ ರಿಂದ ೮೫ ರಷ್ಟು ಉಪಕರಣಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದ್ದು, ಇಂತಹ ಆಮದು ಮಾಡಿಕೊಳ್ಳುವ ವೈದ್ಯಕೀಯ ಸಾಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮತ್ತು ದೇಶದಲ್ಲಿ ಚಿಕಿತ್ಸಾ ವೆಚ್ಚವನ್ನು ಕಡಿಮೆ ಮಾಡುವ ಗುರಿಯನ್ನು ಈ ರೀತಿಯ ಕ್ರಮ ಹೊಂದಿದೆ. ವೈದ್ಯಕೀಯ ತಂತ್ರಜ್ಞಾನ ವಲಯದಲ್ಲಿ ಭಾರತವನ್ನು ಹೆಚ್ಚು ಸ್ವಾವಲಂಬಿಯನ್ನಾಗಿಸುವಲ್ಲಿ ಇದು ಸಹಕಾರಿಯಾಗಲಿದೆ. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಏಮ್ಸ್ ನಿರ್ದೇಶಕ ಎಮ್.ಶ್ರೀನಿವಾಸ್ ಈ ಉಪಕ್ರಮ ವಿವಿಧ ಕಂಪನಿಗಳು ಹಾಗೂ ಸಂಸ್ಥೆಗಳು ಅಗತ್ಯ ಬದಲಾವಣೆಗಳನ್ನು ಮಾಡುವ ಜೊತೆಗೆ ದೇಶ, ವಿಶ್ವದ ಅತ್ಯುತ್ತಮ ಉಪಕರಣಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಲಿದೆ ಎಂದು ಹೇಳಿದ್ದಾರೆ.

**ಧ್ವನಿ: ಎಮ್.ಶ್ರೀನಿವಾಸ್, ಏಮ್ಸ್ ನಿರ್ದೇಶಕ ( ೧೮ ಸೆಕೆಂಡ್‌ಗಳು)**

**<><*<><>*><>**

ಲೋಕಸಭೆಯಲ್ಲಿ ನಿನ್ನೆ ೨೦೨೫ರ ಹಣಕಾಸು ವಿಧೇಯಕವನ್ನು ಅಂಗೀಕರಿಸಲಾಗಿದೆ. ಈ ವಿಧೇಯಕವು ೨೦೨೫-೨೬ ರ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರದ ಹಣಕಾಸು

ಪ್ರಸ್ತಾವನೆಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತದೆ. ವಿಧೇಯಕ ಮೇಲಿನ ಚರ್ಚೆಗೆ ಉತ್ತರಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಹಣಕಾಸು ವಿಧೇಯಕ ೨೦೨೫, ತೆರಿಗೆದಾರರನ್ನು ಗೌರವಿಸಲು ಮತ್ತು ವ್ಯವಹಾರವನ್ನು ಸುಲಭಗೊಳಿಸಲು ಅಭೂತಪೂರ್ವ ತೆರಿಗೆ ಪರಿಹಾರವನ್ನು ಒದಗಿಸುತ್ತದೆ ಎಂದು ಹೇಳಿದರು. ಹೊಸ ತೆರಿಗೆ ವ್ಯವಸ್ಥೆಯಡಿಯಲ್ಲಿ ೧೨ ಲಕ್ಷ ರೂಪಾಯಿಗಳ ಆದಾಯದವರೆಗೆ ಶೂನ್ಯ ಆದಾಯ ತೆರಿಗೆ ಇರಲಿದೆ ಎಂದು ಅವರು ತಿಳಿಸಿದರು. ಮುಂದಿನ ಮಳೆಗಾಲದ ಅಧಿವೇಶನದಲ್ಲಿ ಹೊಸ ಆದಾಯ ತೆರಿಗೆ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು. ಈ ಹಣಕಾಸು ವಿಧೇಯಕವು, ಕೈಗಾರಿಕಾ ಸರಕುಗಳಿಗೆ ೭ ಕಸ್ಟಮ್ಸ್ ಸುಂಕ ದರಗಳನ್ನು ತೆಗೆದು ಹಾಕಲು ಪ್ರಸ್ತಾಪಿಸಿದೆ. ವಿದ್ಯುತ್ ವಾಹನಗಳಿಗೆ ಬ್ಯಾಟರಿ ಉತ್ಪಾದನೆಯನ್ನು ಉತ್ತೇಜಿಸಲು ಸರ್ಕಾರವು ಹಣಕಾಸು ವಿಧೇಯಕವು ೩೫ ಉತ್ಪನ್ನಗಳಲ್ಲಿ ವಿನಾಯಿತಿ ಪಡೆದ ಸುಂಕ ಪಟ್ಟಿಯಲ್ಲಿ ಸೇರಿಸಲು ಪ್ರಸ್ತಾಪಿಸಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದರು.

**<><*<><>*><>**

ಭಾರತ-ಚೀನಾ ಗಡಿ ವ್ಯವಹಾರಗಳ ಸಮಾಲೋಚನೆ ಮತ್ತು ಸಮನ್ವಯಕ್ಕಾಗಿ ನಡೆದ ೩೩ನೇ ಕಾರ್ಯಕಾರಿ ಸಭೆ -Wಒಅಅ ಚೀನಾದ ಬೀಜಿಂಗ್‌ನಲ್ಲಿ ನಿನ್ನೆ ನಡೆಯಿತು. ಭಾರತ-ಚೀನಾ ಗಡಿ ಪ್ರದೇಶಗಳಲ್ಲಿನ ವಾಸ್ತವ ನಿಯಂತ್ರಣ ರೇಖೆಯ ಉದ್ದಕ್ಕೂ ಪರಿಸ್ಥಿತಿಯನ್ನು ಸಭೆಯು ಸಮಗ್ರವಾಗಿ ಪರಿಶೀಲಿಸಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಈ ನಿಟ್ಟಿನಲ್ಲಿ ಸಂಬಂಧಿತ ರಾಜತಾಂತ್ರಿಕ ಮತ್ತು ಮಿಲಿಟರಿ ಕಾರ್ಯವಿಧಾನಗಳನ್ನು ನಿರ್ವಹಿಸಲು ಮತ್ತು ಬಲಪಡಿಸಲು ಉಭಯ ನಿಯೋಗಗಳು ಒಪ್ಪಿಕೊಂಡಿರುವುದಾಗಿ ಎಂದು ಸಚಿವಾಲಯ ತಿಳಿಸಿದೆ. ಗಡಿಯಾಚೆಗಿನ ನದಿಗಳು ಮತ್ತು ಕೈಲಾಸ-ಮಾನಸ ಸರೋವರ ಯಾತ್ರೆ ಸೇರಿದಂತೆ ಗಡಿಯಾಚೆಗಿನ ಸಹಕಾರ ಮತ್ತು ವಿನಿಮಯಗಳ ಆರಂಭಿಕ ಪುನರಾರಂಭದ ಬಗ್ಗೆಯೂ ಈ ಸಂದರ್ಭದಲ್ಲಿ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಈ ವರ್ಷದ ಕೊನೆಯಲ್ಲಿ ಭಾರತದಲ್ಲಿ ನಡೆಯಲಿರುವ ವಿಶೇಷ ಪ್ರತಿನಿಧಿಗಳ ಮುಂದಿನ ಸಭೆಗೆ ಸಿದ್ಧತೆಗಳನ್ನು ಮಾಡಲು ಉಭಯ ರಾಷ್ಟ್ರಗಳು ಒಟ್ಟಾಗಿ ಕಾರ್ಯ ನಿರ್ವಹಿಸಲು ಸಹಮತ ವ್ಯಕ್ತಪಡಿಸಿವೆ.

**<><*<><>*><>**

೨೦೪೭ ರ ವೇಳೆಗೆ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವಲ್ಲಿ ಅಲ್ಪಸಂಖ್ಯಾತರು ಗಣನೀಯ ಪಾತ್ರ ವಹಿಸಲಿದ್ದಾರೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ರಾಜ್ಯ ಅಲ್ಪಸಂಖ್ಯಾತ ಆಯೋಗಗಳ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಅಲ್ಪಸಂಖ್ಯಾತರ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಗೆ ಆದ್ಯತೆ ನೀಡುವ ಅಗತ್ಯವನ್ನು ಒತ್ತಿ ಹೇಳಿದರು. ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು, ಬೌದ್ಧರು, ಜೈನರು ಮತ್ತು ಝೋರಾಸ್ಟ್ರಿಯನ್ನರು ಸೇರಿದಂತೆ ಆರು ಅಧಿಸೂಚಿತ ಸಮುದಾಯಗಳ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ ಎಂದು ತಿಳಿಸಿದರು. ರಾಜ್ಯ ಅಲ್ಪಸಂಖ್ಯಾತ ಆಯೋಗಗಳ ಎಲ್ಲಾ ಪಾಲುದಾರರು ಮಧ್ಯಪ್ರವೇಶಿಸಿ ಅಲ್ಪಸಂಖ್ಯಾತರ ಯೋಗಕ್ಷೇಮಕ್ಕಾಗಿ ಪ್ರಮುಖ ಯೋಜನೆಗಳನ್ನು ಗುರುತಿಸಬೇಕೆಂದು ಒತ್ತಾಯಿಸಿದ ಸಚಿವರು, ಅಂತಹ ಯೋಜನೆಗಳ ಅನುಷ್ಠಾನಕ್ಕೆ ಸಾಧ್ಯವಿರುವ ಎಲ್ಲಾ ಆರ್ಥಿಕ ನೆರವು ಒದಗಿಸುವುದಾಗಿ ಭರವಸೆ ನೀಡಿದರು.

**<><*<><>*><>**

ಉತ್ತರಾಖಂಡದ ನಂತರ ಏಕರೂಪ ನಾಗರಿಕ ಸಂಹಿತೆ-ಯುಸಿಸಿ ಅನ್ನು ಜಾರಿಗೆ ತಂದ ದೇಶದ ಎರಡನೇ ರಾಜ್ಯ ಗುಜರಾತ್ ಆಗಲಿದೆ ಎಂದು ಗುಜರಾತ್ ರಾಜ್ಯ ಕಾನೂನು ಸಚಿವ ಋಷಿಕೇಶ್ ಪಟೇಲ್ ತಿಳಿಸಿದ್ದಾರೆ. ರಾಜ್ಯ ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಎಲ್ಲಾ ಜನರಿಗೆ ಸಮಾನ ನ್ಯಾಯವನ್ನು ಖಾತರಿಪಡಿಸುವ ಮತ್ತು ಏಕ್ ಭಾರತ್, ಶ್ರೇಷ್ಠ ಭಾರತ್ ಪರಿಕಲ್ಪನೆಯನ್ನು ಸಾಕಾರಗೊಳಿಸುವತ್ತ ಇದೊಂದು ಪ್ರಮುಖ ಹೆಜ್ಜೆಯಾಗಿದೆ. ನ್ಯಾಯಾಂಗ ಪ್ರಕ್ರಿಯೆಯನ್ನು ವೇಗಗೊಳಿಸಲು ಗುಜರಾತ್ ಸರ್ಕಾರ ರಾಜ್‌ಕೋಟ್, ಸೂರತ್ ಮತ್ತು ವಡೋದರಾ ಜಿಲ್ಲಾ ಕೇಂದ್ರಗಳಲ್ಲಿ ಮೂರು ನೂತನ ಮಧ್ಯಸ್ಥಿಕೆ ನ್ಯಾಯ ಮಂಡಳಿಗಳಿಗೆ ನಿಂಬಂಧನೆಗಳನ್ನು ಪರಿಚಯಿಸಲಾಗಿದೆ ಎಂದು ಹೇಳಿದರು.

**<><*<><>*><>**

ಲೋಕಸಭೆಯಲ್ಲಿ ನಿನ್ನೆ ಬಾಯ್ಲರ್ ಮಸೂದೆ-೨೦೨೪ಕ್ಕೆ ಅನುಮೋದನೆ ನೀಡಲಾಗಿರುವ ಹಿನ್ನೆಲೆ ಈ ಮಸೂದೆಯನ್ನು ಸಂಸತ್ತು ಅಂಗೀಕರಿಸಿದಂತಾಗಿದೆ. ಈ ಮಸೂದೆ ೧೯೨೩ರ ಬಾಯ್ಲರ್ ಕಾಯ್ದೆಯನ್ನು ರದ್ದುಗೊಳಿಸಿ, ಬಾಯ್ಲರ್‌ಗಳ ನಿಯಂತ್ರಣ ಮತ್ತು ಸ್ಟೀಮ್ ಬಾಯ್ಲರ್‌ಗಳ ಸ್ಫೋಟದ ಅಪಾಯದಿಂದ ಜನರ ಜೀವ ಮತ್ತು ಆಸ್ತಿಗೆ ರಕ್ಷಣೆ ಒದಗಿಸುವ ಗುರಿ ಹೊಂದಿದೆ. ರಾಜ್ಯಸಭೆಯಲ್ಲಿ ಈ ಮಸೂದೆಗೆ ಕಳೆದ ಡಿಸೆಂಬರ್‌ನಲ್ಲೇ ಅನುಮೋದನೆ ನೀಡಲಾಗಿತ್ತು. ದೇಶದ ಬಾಯ್ಲರ್‌ಗಳ

ತಯಾರಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ನೊಂದಣಿ ಮತ್ತು ತಪಾಸಣೆಯಲ್ಲಿ ಏಕರೂಪತೆಯನ್ನು ತರಲು ಈ ಕಾಯ್ದೆ ಅನುವು ಮಾಡಿಕೊಡುತ್ತದೆ.

**<><*<><>*><>**

ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ - ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ತಂಡ ೧೧ ರನ್‌ಗಳಿಂದ ಗೆಲುವು ಸಾಧಿಸಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಪಂಜಾಬ್ ಕಿಂಗ್ಸ್ ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೪೩ ರನ್ ಮಾಡಿತು. ಇದಕ್ಕೆ ಉತ್ತರವಾಗಿ ಗುಜರಾತ್ ತಂಡ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೩೨ ರನ್ ಗಳಿಸಲಷ್ಟೇ ಶಕ್ತವಾಯಿತು. ತಮ್ಮ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನಕ್ಕಾಗಿ ಅಜೇಯ ೯೭ ರನ್ ಗಳಿಸಿದ ಪಂಜಾಬ್ ಕಿಂಗ್ಸ್‌ನ ಶ್ರೇಯಸ್ ಅಯ್ಯರ್‌ಗೆ ಪಂದ್ಯ ಶ್ರೇಷ್ಠ ಪ್ರಶಸ್ತಿ ನೀಡಲಾಯಿತು. ಗುವಾಹಟಿಯಲ್ಲಿಂದು ನಡೆಯಲಿರುವ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

**<><*<><>*><>**

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಿನ್ನೆ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್ ಶಿಪ್‌ನ ೮೭ ಕೆಜಿ ಗ್ರೀಕೋ ರೋಮನ್ ವಿಭಾಗದಲ್ಲಿ ಭಾರತೀಯ ಕುಸ್ತಿಪಟು ಸುನಿಲ್ ಕುಮಾರ್ ಕಂಚಿನ ಪದಕ ಗಳಿಸಿದ್ದಾರೆ. ೮೭ ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಸೋಲನುಭವಿಸಿದ ನಂತರ ನಡೆದ ಕಂಚಿನ ಪದಕ ಪಂದ್ಯದಲ್ಲಿ, ಸುನಿಲ್, ಚೀನಾದ ಜಿಯಾಕ್ಸಿನ್ ಹುವಾಂಗ್ ಅವರನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾದರು. ೨೦೧೯ ರಲ್ಲಿ ಬೆಳ್ಳಿ ಪದಕ ವಿಜೇತ ಸುನಿಲ್, ಇದಕ್ಕೂ ಮೊದಲು ಕ್ವಾರ್ಟರ್ ಫೈನಲ್‌ನಲ್ಲಿ ತಜಿಕಿಸ್ತಾನದ ಸುಖ್ರೋಬ್ ಅಬ್ದುಲ್‌ಖೇವ್ ವಿರುದ್ಧ ೧೦-೧ ಜಯ ಸಾಧಿಸಿದ್ದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**